KACB030035552022

**2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿಕ್ಕಬಳ್ಳಾಪುರ**

**ದಿನಾಂಕಃ 05 ನೇ ಆಗಸ್ಟ್ 2024.**

ಉಪಸ್ಥಿತರು : **ಶ್ರೀಮತಿ ಶೃತಿ.ಎಂ.** ಬಿ.ಎಸ್.ಸಿ, ಎಲ್.ಎಲ್.ಬಿ
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕಬಳ್ಳಾಪುರ.

**ಸಿ.ಸಿ.ನಂ.1337/2022**

**ಪಿರ್ಯಾದಿಃ** ರಾಜ್ಯದ ಪರವಾಗಿ, ಆರಕ್ಷಕ ಉಪ ನಿರೀಕ್ಷಕರು,
ನಂದಿ ಗಿರಿಧಾಮ ಪೋಲೀಸ್ ಠಾಣೆ, ಚಿಕ್ಕಬಳ್ಳಾಪುರ

– **ವಿರುದ್ಧ** –

**ಆರೋಪಿಗಳುಃ** 1. ಶ್ರೀ.ಚಂದ್ರಶೇಖರ್ ಬಿನ್ ಈಶ್ವರಚಾರ್
ವಯಸ್ಸು 55 ವರ್ಷ,

2. ಗಿರಿಜಾಕುಮಾರ್ ಬಿನ್ ಈಶ್ವರಚಾರ್
ವಯಸ್ಸು 50 ವರ್ಷ,

ಇಬ್ಬರ ವಾಸಃ ನಂದಿ ಗ್ರಾಮ,
ಚಿಕ್ಕಬಳ್ಳಾಪುರ ತಾಲ್ಲೂಕು.

**(ಆರೋಪಿತರ ಪರ ಶ್ರೀ.ಆರ್.ಬಿ ವಕೀಲರು ಹಾಜರಾಗಿರುತ್ತಾರೆ)**

| | | |
|---|---|---|
| 1 | ಅಪರಾಧ ಘಟಿಸಿದ ದಿನಾಂಕ | 15-08-2022 |
| 2 | ಅಪರಾಧ ವರದಿಯಾದ ದಿನಾಂಕ | 18-08-2022 |
| 3 | ಆರೋಪಿಸಲಾದ ಕಲಂಗಳು | ಭಾ.ದಂ.ಸ.ಕಲಂ 323,324,504 ಸಹವಾಚಕ ಕಲಂ 34. |

| | | |
|---|---|---|
| 5 | ಪಿರ್ಯಾದಿದಾರನ ಹೆಸರು | ಶ್ರೀ.ಶಿವಕುಮಾರ್ |
| 6 | ವಿಚಾರಣೆ ಪ್ರಾರಂಭವಾದ ದಿನಾಂಕ | 01-08-2024 |
| 7 | ವಿಚಾರಣೆ ಮುಕ್ತಾಯವಾದ ದಿನಾಂಕ | 01-08-2024 |
| 8 | ಪಿರ್ಯಾದಿಯ ಪರವಾಗಿ | ಸಹಾಯಕ ಸರ್ಕಾರಿ ಅಭಿಯೋಜಕರು, |
| 9 | ಆರೋಪಿತರ ಪರ ವಕೀಲರು | ಶ್ರೀ.ಆರ್.ಬಿ ವಕೀಲರು, |
| 10 | ಪೀಠಾಸೀನಾಧಿಕಾರಿಗಳ ಅಭಿಪ್ರಾಯ | ಆರೋಪಿತರನ್ನು ನಿರ್ದೋಷಿಗಳೆಂದು ಪರಿಗಣಿಸಿದೆ. |

**(ಶೃತಿ.ಎಂ.)**
2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಕ್ಕಬಳ್ಳಾಪುರ.

-: **<u>ತೀರ್ಪು</u>** :-

ಈ ಪ್ರಕರಣವನ್ನು ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಗಿರಿಧಾಮ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323,324,504 ಸಹವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದಾಖಲಿಸಿದ್ದಿರುತ್ತದೆ.

2. ಅಭಿಯೋಜನೆಯ ಪ್ರಕಾರ, ಚಿಕ್ಕಬಳ್ಳಾಪುರ ನಂದಿ ಗಿರಿಧಾಮ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನಂದಿ ಗ್ರಾಮದಲ್ಲಿ ದಿಃ 15-08-2022 ರಂದು ಸಂಜೆ 5-00 ರ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಿಬ್ಬರೂ ಚಾಸಾ-1 ರವರ ಮನೆಯ ಬಳಿ ಇದ್ದ ಕಂಪೌಂಡ್ ಗೋಡೆಯನ್ನು ಹೊಡೆದು ಮನೆಯ ಮೆಟ್ಟಿಲುಗಳನ್ನು ನಿರ್ಮಿಸಲು ಹೋದಾಗ ಚಾಸಾ-1 ರವರು ಬಂದು ತಡೆದಾಗ ಆರೋಪಿತರಿಬ್ಬರೂ

ಚಾಸಾ–1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಮೈಮೇಲೆ ಹೊಡೆದು, ನೆಲದ ಮೇಲೆ ತಳ್ಳಿ ಕಾಲುಗಳಿಂದ ಒದ್ದಿದ್ದು, 1 ನೇ ಆರೋಪಿ ಕಬ್ಬಿಣದ ರಾಡ್ ನಿಂದ ಚಾಸಾ–1 ರವರ ಎಡಕೈಗೆ ಹೊಡೆದಿದ್ದು, 2 ನೇ ಆರೋಪಿ ಚಾಸಾ–1 ರವರಿಗೆ ದೊಣ್ಣೆಯಿಂದ ಕತ್ತಿನ ಭಾಗಕ್ಕೆ ಹೊಡೆದ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುವುದಾಗಿ ಇರುತ್ತದೆ.

3. ಘಟನೆಯ ಬಗ್ಗೆ ಚಾಸಾ–1 ರವರು ನೀಡಿದ ಪ್ರಥಮ ವರ್ತಮಾನ ವರದಿಯ ಆಧಾರದ ಮೇಲೆ ಅಪರಾಧ ಸಂಖ್ಯೆಃ 117/2022 ರಂತೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಚಿಕ್ಕಬಳ್ಳಾಪುರ ನಂದಿಗಿರಿಧಾಮ ಪೋಲೀಸ್ ಠಾಣೆಯ ಪೋಲೀಸರು ಆರೋಪಿತರ ವಿರುದ್ಧ ಮೇಲ್ಕಾಣಿಸಿದ ಕಲಂಗಳ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತರು ಜಾಮೀನಿನ ಮೇಲಿರುತ್ತಾರೆ. ಆದೇಶಿಕೆ ಜಾರಿಯಾದ ನಂತರ ನ್ಯಾಯಾಲಯದ ಮುಂದೆ ಹಾಜರಾದ ಆರೋಪಿತರಿಗೆ ಪ್ರಕರಣದ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಒದಗಿಸಲಾಗಿದೆ. ಆರೋಪಿತರು ತಮ್ಮ ವಿರುದ್ಧದ ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಒಬ್ಬ ಸಾಕ್ಷಿದಾರರನ್ನು ಫ್ರಾಸಾ–1 ಎನ್ನುವುದಾಗಿ ವಿಚಾರಿಸಿಕೊಂಡಿರುತ್ತದೆ ಮತ್ತು ಎರಡು ದಾಖಲೆಗಳನ್ನು ಹಾಜರುಪಡಿಸಿ ಅದನ್ನು ನಿಪಿ–1 ಮತ್ತು 2 ಎನ್ನುವುದಾಗಿ ಗುರುತಿಸಿಕೊಂಡಿರುತ್ತಾರೆ.

5. ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಅಪರಾಧಿಕ ಹೇಳಿಕೆಗಳು ಕಂಡು ಬಾರದ ಕಾರಣ ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313(1)(ಬಿ) ಅಡಿಯಲ್ಲಿ ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸುವ ಹಂತವನ್ನು ವರ್ಜಿಸಲಾಗಿದೆ.

6. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತರ ಪರ ನ್ಯಾಯವಾದಿಗಳ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

7. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

1. ನಂದಿ ಗಿರಿಧಾಮ ಪೊಲೀಸ್ ಠಾಣಾ ಸರಹದ್ದಿನ ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಗ್ರಾಮದ ವಾಸಿಯಾದ ಚಾಸಾ-1 ರವರ ಮನೆಯ ಬಳಿ ಇದ್ದ ಕಂಪೌಂಡ್ ಗೋಡೆಯನ್ನು ದಿಃ 15-08-2022 ರಂದು ಸಂಜೆ 5-00 ರ ಸಮಯದಲ್ಲಿ ಆರೋಪಿತರು ಹೊಡೆದು ಮನೆಯ ಮೆಟ್ಟಿಲುಗಳನ್ನು ನಿರ್ಮಿಸಲು ಹೋದಾಗ ಚಾಸಾ-1 ರವರು ತಡೆದಾಗ ಆರೋಪಿತರು ಸಮಾನ ಉದ್ದೇಶದಿಂದ ಹಾಗೂ ಅಪರಾಧ ಎಸಗುವ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಹಾಗೂ ಅಪರಾದ

ಎಸಗುವ ಉದ್ದೇಶದಿಂದ ಬಂದ್ದು ಚಾಸಾ–1 ರವರಿಗೆ ತಮ್ಮ ಕೈಗಳಿಂದ ಅವರ ಮೈಮೇಲೆ ಹೊಡೆದು ನೆಲದ ಮೇಲೆ ತಳ್ಳಿ ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯಗಳುಂಟುಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ ?

3. ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಹಾಗೂ ಅಪರಾಧ ಎಸಗುವ ಉದ್ದೇಶದಿಂದ ಬಂದಿದ್ದು ಆ ಪೈಕಿ 1 ನೇ ಆರೋಪಿ ಕಬ್ಬಿಣದ ರಾಡ್ ನಿಂದ ಚಾಸಾ–1 ರವರ ಕತ್ತಿನ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಳುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ ?

4. ಏನು ಆದೇಶ ?

8. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆಃ

**–: ಅಂಶಗಳು :–**

ಅಂಶ :– 1 ರಿಂದ 3 ನಕಾರಾತ್ಮಕವಾಗಿ,

ಅಂಶ :– 4 ಅಂತಿಮ ಆದೇಶದಂತೆ ಈ ಮುಂದಿನ

**-: ಕಾ ರ ಣ ಗ ಳು :-**

9. **ಅಂಶ-1 ರಿಂದ 3:-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಅನುಕೂಲತೆಯ ದೃಷ್ಟಿಯಿಂದ ಮತ್ತು ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಇವುಗಳನ್ನು ಜೊತೆಜೊತೆಯಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯು ತನ್ನ ನಿಲುವನ್ನು ರುಜವಾತುಪಡಿಸಲು ಒಟ್ಟು 8 ಸಾಕ್ಷಿದಾರರನ್ನು ಸಾಕ್ಷ್ಯ ಪಟ್ಟಿಯಲ್ಲಿ ಹೆಸರಿಸಿಕೊಂಡಿರುತ್ತದೆ. ಪಿರ್ಯಾಧಿ ಸಾಕ್ಷಿದಾರ ಎನ್ನಲಾದ ಸಾಕ್ಷಿದಾರರನ್ನು ಫ್ರಾಸಾ-1 ಎನ್ನುವುದಾಗಿ ಎನ್ನುವುದಾಗಿ ಅಭಿಯೋಜನೆಯು ವಿಚಾರಿಸಿಕೊಂಡಿರುತ್ತದೆ.

11. ಫ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಆರೋಪಿತರು ಗೊತ್ತಿರುವುದಾಗಿ, ನಮ್ಮ ಮತ್ತು ಆರೋಪಿತರ ನಡುವೆ ಜಮೀನಿನ ವಿಚಾರವಾಗಿ ಸಣ್ಣ ಪುಟ್ಟ ಬಾಯಿ ಮಾತಿನ ಗಲಾಟೆ ಆಗಿದ್ದು, ಆ ಸಮಯದಲ್ಲಿ ತಾನು ಪೋಲೀಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ತನ್ನಿಂದ ಎರಡು ದಾಖಲೆಗಳಿಗೆ ನನ್ನಿಂದ ಸಹಿ ಪಡೆದಿದ್ದು, ಸದರಿ ದಾಖಲೆಗಳು ಯಾವುವು ಅವುಗಳಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆರೋಪಿತರು ಯಾವತ್ತು ನಮ್ಮಗೆ ಯಾವುದೇ ವಸ್ತುವಿನಿಂದಾಗಲೀ ಅಥವಾ ಕೈಯಿಂದಾಗಲೀ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ನಿಪಿ-1 ಮತ್ತು 2 ರಲ್ಲಿರುವ ಯಾವುದೇ ಅಂಶಗಳು ನನಗೆ ಗೊತ್ತಿರುವುದಿಲ್ಲ, ನಿಪಿ-2 ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ನಾನು ಆರೋಪಿತರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದು

ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

12. ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅವರನ್ನು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದ್ದಾಗಿಯೂ ಸಹ ಅಭಿಯೋಜನೆಯ ನಿಲುವನ್ನು ಪುಷ್ಠಿಕರಿಸುವಂತಹ ಯಾವುದೇ ಮಹತ್ವದ ಅಂಶಗಳನ್ನು ಹೊರತರಿಸಿರುವುದಿಲ್ಲ.

13. ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಆರೋಪಿತರ ವಿರುದ್ಧ ಆಪಾದಿಸಲಾದ ಕೃತ್ಯವನ್ನು ಎಸಗಿದ್ದಾರೆ ಎನ್ನುವ ಸಂಗತಿಯನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಾಗಿ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೆ ಆರೋಪಿತರ ವಿರುದ್ಧದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ತೀರ್ಮಾನಿಸಿದ್ದು ತನ್ಮೂಲಕ ಈ ಮೇಲಿನ ಎಲ್ಲಾ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

14. **ಅಂಶ 4**:-ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನ್ಯಾಯಾಲಯವು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## ಆದೇಶ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 323,324,504 ಸಹವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಗಳಿಗಾಗಿ ನಿರ್ದೋಷಿಗಳೆಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.**

**ಆರೋಪಿತರು ಬರೆದು ಕೊಟ್ಟ ಜಾಮೀನು ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಗಿದೆ.**

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 05 ನೇ ಆಗಸ್ಟ್ 2024 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

(**ಶೃತಿ.ಎಂ.**)
2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ.

-: **ಅನುಬಂಧ** :-

**ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ-1: ಶ್ರೀ.ಶಿವಕುಮಾರ

**ಆರೋಪಿತರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

- ಇಲ್ಲ -

**ಅಭಿಯೋಜನೆಯ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ-1: ದೂರು

ನಿಪಿ-2: ಮಹಜರ್

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

- ಇಲ್ಲ -

**ಅಭಿಯೋಜನೆಯ ಪರವಾಗಿ ಗುರುತಿಸಲಾದ ಮುದ್ದೆ ಮಾಲುಗಳುಃ**

- ಇಲ್ಲ -

(**ಶೃತಿ.ಎಂ.**)
2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ.